ದಿನಾಂಕಃ 20.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ **9** ಮತ್ತು **11** ನೇ ಪ್ರತಿವಾದಿ ಪರ ಶ್ರೀ ಕೆ ಎಂ ಪಿ ವಕೀಲರಿಂದಃ

ನಿಮ್ಮ ವಿಭಾಗ ಪತ್ರದಲ್ಲಿನ ಡಿ ಷೆಡ್ಯೂಲ್ ನ್ನು ಅಕ್ಕಪಕ್ಕದವರು ಒತ್ತುವರಿ ಮಾಡಿರುವುದರಿಂದ ಹಾಗೆಯೇ ಉಳಿಸಿಕೊಂಡಿದ್ದೇವೆ ಎಂದು ಹೇಳಿದ್ದೀರಿ ಎಂದರೆ ಸರಿ . ವಿಭಾಗ ಪತ್ರದಲ್ಲಿನ ಡಿ ಷೆಡ್ಯೂಲ್ ಸ್ವತ್ತಿನ 32 ಸೈಟುಗಳು ಒತ್ತುವರಿಯಾಗಿತ್ತು ಎಂದು ವಿಭಾಗ ಪತ್ರದಲ್ಲಿ ನಮೂದಿಸಿದ್ದೀರಿ ಎಂದರೆ ಸರಿಯಲ್ಲ ಬೌಂಡರಿ ಮಾತ್ರ ಒತ್ತುವರಿಯಾಗಿತ್ತು . ನಿಪಿ 7 ರ 3 ನೇ ಪ್ಯಾರಾದಲ್ಲಿ 32 ಸೈಟುಗಳು ಒತ್ತುವರಿಯಾಗಿದ್ದ ಕಾರಣ ಹಾಗೆಯೇ ಉಳಿಸಿಕೊಂಡಿದ್ದೇವೆ ಎಂದು ಹೇಳಿದ್ದೀರಿ ಎಂದರೆ ಸರಿ ಎಂದು ಒಪ್ಪಿ ದ ಮೇರೆಗೆ ಸದರಿ ಪ್ಯಾರಾವನ್ನು ನಿಪಿ **7 (**ಎ**)** ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಬೌಂಡರಿ ಮಾತ್ರ ಒತ್ತುವರಿಯಾಗಿತ್ತು ಎಂದು ಹೇಳುತ್ತಾರೆ . ನಿಮ್ಮ ಪ್ರಕಾರ ಎಷ್ಟು ಸೈಟುಗಳು ಬೌಂಡರಿ ಒತ್ತುವರಿಯಾಗಿತ್ತು ಎಂದರೆ 56/1 ಎ ಸರ್ವೆ ನಂಬರ್ ನ ಬೌಂಡರಿ ಒತ್ತುವರಿಯಾಗಿತ್ತು ಆದ ಕಾರಣ ಎಲ್ಲಾ ಸೈಟ್ ನ ನಂಬರ್ ಗಳನ್ನು ನಿಪಿ 7 ರಲ್ಲಿ ಹೇಳಿದ್ದೇವೆ . 56/1 ಎ ರಲ್ಲಿ 32 ಸೈಟ್ ಇತ್ತೇ ಅಥವಾ ಇನ್ನೂ

ಹೆಚ್ಚು ಸೈಟುಗಳು ಇದ್ದವೇ ಎಂದರೆ 32 ಸೈಟುಗಳು . ಸರ್ವೆ ನಂಬರ್ 56/1 ಎ ಬೌಂಡರಿ ಒತ್ತುವರಿಯಾಗಿದೆ ಎಂದು ನಿಮ್ಮ ವಿಬಾಗ ಪತ್ರದಲ್ಲಿ ಎಲ್ಲೂ ಹೇಳಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ಸೈಟುಗಳನ್ನು ನಮೂದು ಮಾಡಿರುವುದರಿಂದ ಸರ್ವೆ ನಂಬರ್ ಹೇಳಿರುವುದಿಲ್ಲ. ಆ ರೀತಿ ಒತ್ತುವರಿ ಮಾಡಿರುವವರು ಯಾರು ಎಂದು ಗೊತ್ತಿತ್ತೆ ಎಂದರೆ ಅಕ್ಕ ಪಕ್ಕದ ಮುಸ್ಲಿಂ ಜನಾಂಗದವರು . ಒತ್ತುವರಿ ತೆರವು ಗೊಳಿಸಲು ನೀವು ಅವರ ವಿರುದ್ದ ಕಾನೂನು ಕ್ರಮ ತೆಗೆದುಕೊಂಡಿದ್ದರೇ ಎಂದರೆ ಹೌದು , ಪೊಲೀಸರಿಗೆ ದೂರು ನೀಡಿದ್ದೆವು. ಅವರ ವಿರುದ್ದ ಯಾವುದೇ ದಾವೆಯನ್ನು ಹೂಡಿರಲಿಲ್ಲ. ಸುಮಾರು ಎಷ್ಟು ಜನ ಮುಸ್ಲಿಂ ಜಾನಂಗದವರು ಒತ್ತುವರಿ ಮಾಡಿದ್ದರು ಎಂದರೆ ಸುಮಾರು 10 ಜನ ಇರಬಹುದು ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ , ಅವರ ಹೆಸರುಗಳನ್ನು ಹೇಳಲು ಆಗುವುದಿಲ್ಲ. ಪೊಲೀಸ್ ದೂರನ್ನು ಬಾಬು ಮತ್ತು ಇತರರ ವಿರುದ್ದ ಕೊಟ್ಟಿದ್ದೆವು . ದೂರು ನೀಡಿರುವ ವಿಚಾರ ಮತ್ತು ಒತ್ತುವರಿ ಆಗಿರುವ ವಿಚಾರ ಯಾವುದನ್ನು ನೀವು ಹೇಳಿಲ್ಲ ಎಂದರೆ ಸರಿ .

ಒತ್ತುವರಿ ಮಾಡಿರುವ ವಿಚಾರ ನಿಮಗೆ ಯಾವಾಗ ಗೊತ್ತಾಯಿತು ಎಂದರೆ ವಿಭಾಗ ಪತ್ರ ಮಾಡಿಕೊಂಡ ನಂತರದಲ್ಲಿ ಗೊತ್ತಾಯಿತು. ಒತ್ತುವರಿಯ ವಿಚಾರ ತಿಳಿದುಕೊಳ್ಳುವ ಮುಂಚೆ ವಿಭಾಗ ಪತ್ರದಲ್ಲಿ ಅದರ ಬಗ್ಗೆ ನಮೂದಿಸಿದ್ದೀರಾ ಎಂದರೆ ನಾವು

ಮತ್ತು ನರಸಿಂಹಯ್ಯರವರು ವಿಭಾಗ ಪತ್ರ ಮಾಡಿಕೊಂಡ ಸಮಯಕ್ಕೆ ನರಸಿಂಹಯ್ಯರವರು ಒತ್ತುವರಿ ಬಗ್ಗೆ ವಿಭಾಗ ಪತ್ರದಲ್ಲಿ ಬರೆಸಿದ್ದರು. ನಿಮಗೆ ಗೊತ್ತಿತ್ತು ಆದರೂ ನರಸಿಂಹಯ್ಯ ರವರು ಒತ್ತುವರಿ ಬಗ್ಗೆ ಬರೆಸಿದ್ದರು ಎಂದು ಸುಳ್ಳು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಮೇಲೆ ಪ್ರಸ್ತುತ ದಾವೆಯನ್ನು ಹೂಡುವ ಮುಂಚೆ ವರ್ಘ್ ಬೋರ್ಡ್ ನ ವಿರುದ್ದ ಡಬ್ಯ್ಲು ಪಿ ಯನ್ನು ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ಸಲ್ಲಿಸಿದ್ದೀರಿ ಎಂದರೆ ಹೌದು ಎಂದು ಸಾಕ್ಷಿ ಒಪ್ಪಿ ದ ಮೇರೆಗೆ ಡಬ್ಲ್ಯು ಪಿ 56649- 50 /2013 ರ ಅರ್ಜಿಯನ್ನು ನಿಡಿ **3** ಎಂದು ಗುರುತಿಸಲಾಯಿತು. ನಿಡಿ 3 ರ ಬಗ್ಗೆಯೂ ನೀವು ಪ್ರಸ್ತುತ ಈ ದಾವೆಯಲ್ಲಿ ಏನು ಹೇಳಿಲ್ಲ ಎಂದರೆ ಸರಿ .

ಸರ್ವೆ ನಂಬರ್ 56/1 ಎ ರ 1 ಎಕರೆ 12 ಗುಂಟೆ ದಾವಾ ಸ್ವತ್ತಿನಲ್ಲಿ ಇರುವ ಸೈಟುಗಳೇ ಡಬ್ಲ್ಯು ಪಿ 56649- 50 /2013 ಅದರ ಷೆಡ್ಯೂಲ್ ಸ್ವತ್ತು ಎಂದರೆ ಹೌದು . ಸಾಕ್ಷಿ ಮುಂದುವರೆದು ಸರ್ವೆ ನಂಬರ್ 56/1 ಎ ರ 1 ಎಕರೆ 12 ಗುಂಟೆ ಸ್ವತ್ತು ವರ್ಘ್ ಬೋರ್ಡ್ ದು ಎಂದು 2010 ರಲ್ಲಿ ನೋಟೀಫೈ ಮಾಡಿದ್ದರಿಂದ ಅದನ್ನು ಪ್ರಶ್ನಿಸಿ 2013 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ಡಬ್ಲ್ಯು ಪಿ 56649- 50 /2013

ಮುಂದೆ ಸಲ್ಲಿಸಿದ್ದಿವಿ . ಅದರಲ್ಲಿ ನರಸಿಂಹಯ್ಯರವರನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸರಿ. ನರಸಿಂಹಯ್ಯರವರು ನೀವೇ ಮಾಡಿ ಎಂದು ಹೇಳಿದ್ದರಿಂದ ನಾವೇ ಮಾಡಿದ್ದೆವು . ಡಬ್ಲ್ಯು ಪಿ 56649- 50 /2013 ಅರ್ಜಿಯಲ್ಲಿ ಬರೆದಿರುವ ಅಂಶಗಳು ಸತ್ಯವಾಗಿದೆಯೇ ಎಂದರೆ ಹೌದು . ಡಬ್ಲ್ಯು ಪಿ 56649- 50 /2013 ರಲ್ಲಿ ಒತ್ತುವರಿ ಮಾಡಿದ್ದಾರೆ ಎಂದು ಪಕ್ಷಗಾರರನ್ನಾಗಿ ಮಾಡಿರುವ ಯಾರನ್ನು ಸಹ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ . 2011 ರಲ್ಲಿ ನಮಗೆ ನೋಟೀಷ್ಯೆ ಮಾಡಿರುವ ವಿಚಾರ ಗೊತ್ತಾಯಿತು ನಂತರ ನರಸಿಂಹಯ್ಯರವರಿಗೆ ಹೇಳಲಾಗಿ ಅವರು ತಮಗೆ ಅನಾರೋಗ್ಯ ಇರುವ ಕಾರಣ ನೀವೇ ಡಬ್ಲ್ಯು ಪಿ 56649-50 /2013 ಸಲ್ಲಿಸಿ ಎಂದು ಹೇಳಿದ್ದರಿಂದ ಹಾಕಿದ್ದೆವು. ಡಬ್ಲ್ಯು ಪಿ 56649-50 /2013 ರಲ್ಲಿ ನೀವು ಮತ್ತು ನರಸಿಂಹಯ್ಯರವರು ಜಂಟಿ ಮಾಲೀಕರು ಎಂದು ಎಲ್ಲೂ ಹೇಳಿಲ್ಲ ಎಂದರೆ ಸರಿಯಲ್ಲ.

ನೀವು ಮಾಡಿಕೊಂಡಿರುವ ಕ್ರಯದ ಕರಾರು ಪತ್ರದಲ್ಲಿ ಹಣ ಪಡೆದುಕೊಂಡಿದ್ದೇವೆ ಎಂದು ನಮೂದು ಮಾಡಿದ್ದೀರಾ ಅದು ಸತ್ಯವೇ ಎಂದು ಸಾಕ್ಷಿ ಒಪ್ಪಿ ದ ಮೇರೆಗೆ ಕ್ರಯದ ಕರಾರು ನಿಡಿ 1 ರ ಆ ಭಾಗವನ್ನು ನಿಡಿ **1 (ಎ)**

ಎಂದು ಗುರುತಿಸಲಾಯಿತು.

ನಿಪಿ 7 ರ ವಿಭಾಗ ಪತ್ರದಲ್ಲಿ ನಿಮಗೂ ಮತ್ತು ನರಸಿಂಹಯ್ಯರವರಿಗೂ ಅರ್ಧ ಅರ್ಧ ಭಾಗ ಇದೆ ಎಂದು ಎಲ್ಲೂ ಹೇಳಿಲ್ಲ ಎಂದರೆ ಸರಿಯಲ್ಲ. ನಿಪಿ 7 ರ ವಿಭಾಗ ಪತ್ರದ ಪ್ರಕಾರ ನಿಮಗೆ 7 ಸೈಟುಗಳು ಮತ್ತು ನರಸಿಂಹಯ್ಯರವರಿಗೆ 31 ಸೈಟುಗಳು ಎಂದರೆ ಸರಿ . ನಿಮಗೆ ಸದರಿ ಸ್ವತ್ತಿನಲ್ಲಿ ಯಾವುದೇ ಹಕ್ಕಿಲ್ಲದಿದ್ದರೂ ಬೇನಾಮಿದಾರರು ಎಂದು 7 ಸೈಟುಗಳನ್ನು ನೀಡಿದ್ದಾರೆ , ನಿಮಗೆ ಆ ಸೈಟುಗಳ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಿಡಿ 1 ಕ್ರಯದ ಕರಾರಿನಲ್ಲಿ ಬರೆದಿದೆ ಎಂದರೆ ಸರಿ ಎಂದು ಸಾಕ್ಷಿ ಒಪ್ಪಿ ದ ಮೇರೆಗೆ ದಪ್ಪ ಅಕ್ಷರದಲ್ಲಿ ಬರೆದಿರುವ ಆ ಎರಡು ಪ್ಯಾರಾಗಳನ್ನು ನಿಡಿ **1 (ಬಿ)** ಎಂದು ಗುರುತಿಸಲಾಯಿತು. ಈ ಹಿಂದೆ ವಿಭಾಗಕ್ಕೆ ಹೂಡಿದ್ದ ದಾವೆಯ ವಾದ ಪತ್ರ ಎಂದು ಸಾಕ್ಷಿಗೆ ತೋರಿಸಲಾಗಿದ ೆ ಅದನ್ನು ಒಪ್ಪಿ ದ ಮೇರೆಗೆ ಓ ಎಸ್ 7084/97 ರ ವಾದಪತ್ರವನ್ನು ನಿಡಿ **4** ಎಂದು ಗುರುತಿಸಲಾಯಿತು. ಪ್ರಸ್ತುತ ಈ ದಾವೆ ಊರ್ಜಿತವಲ್ಲ ಎಂದು ತಿಳಿದಿದ್ದರೂ , ನೀವು ದಾವಾ ಸ್ವತ್ತಿನ ಸ್ವಾ ಧೀನದಲ್ಲಿ ಇಲ್ಲ ಎಂದು ಗೊತ್ತಿದ್ದರೂ , ಸ್ವಾ ಧೀನದಲ್ಲಿರುವವರನ್ನು ಪಕ್ಷಗಾರರನ್ನಾಗಿ

ಮಾಡದೇ ಈ ಸುಳ್ಳು ದಾವೆಯನ್ನು ಹೂಡಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಿಶಾ ರಾಣಿ ಎ. ಸಿ)
III ನೇ ಎ.ಸಿ.ಸಿ & ಎಸ್.ಜೆ,
ಬೆಂಗಳೂರು.